ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**325**
ಸದಸ್ಯರ ಹೆಸರು	:	**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು)**
ಉತ್ತರಿಸಬೇಕಾದ ದಿನಾಂಕ	:	**15.12.2021**
ಉತ್ತರಿಸುವ ಸಚಿವರು	:	**ಮಾನ್ಯ ಕಂದಾಯ ಸಚಿವರು**

ಪ್ರಶ್ನೆ	ಉತ್ತರ
(ಅ) ಪ್ರಸಕ್ತ ಸಾಲಿನಲ್ಲಿ ಸತತ ಮಳೆಯಿಂದಾಗಿ ರಾಜ್ಯದಲ್ಲಿ ಎಷ್ಟು ಹಾನಿಯಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು) **(ಆ)** ಈ ಮಳೆಯಿಂದಾಗಿ ಹಾನಿಗೆ ಪರಿಹಾರವಾಗಿ ಕೇಂದ್ರದಿಂದ ಎಷ್ಟು ಹಣವನ್ನು ಬಿಡುಗಡೆ ಮಾಡುವಂತೆ ಕೋರಲಾಗಿದೆ; ಹಾಗೂ ಕೇಂದ್ರದಿಂದ ಬಿಡುಗಡೆಯಾದ ಮೊತ್ತವೆಷ್ಟು;	ಪ್ರಸಕ್ತ ಸಾಲಿನಲ್ಲಿ ಜುಲೈ ರಿಂದ ನವೆಂಬರ್ ವರೆಗೆ ರಾಜ್ಯಾದ್ಯಂತ ಸುರಿದ ಭಾರಿ ಮಳೆಯಿಂದ ರೂ.18292.57ಕೋಟಿ ಅಂದಾಜು ಬೆಳೆ ಹಾನಿಯಾಗಿದ್ದು, ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ರೂ.2123.47ಕೋಟಿಗಳ ಆರ್ಥಿಕ ನೆರವನ್ನು ಕೋರುತ್ತಾ ಕೇಂದ್ರ ಸರ್ಕಾರಕ್ಕೆ ಮೆಮೋರಾಂಡಮ್ ಸಲ್ಲಿಸಲಾಗಿದೆ. (ಜಿಲ್ಲಾವಾರು ವಿವರ ಅನುಬಂಧದಲ್ಲಿ ಒದಗಿಸಿದೆ).
(ಇ) ಅತಿವೃಷ್ಟಿಯಿಂದಾಗಿ ಹಾನಿಗೊಳಗಾದ ರಸ್ತೆಗಳು ಸೇತುವೆಗಳು ತೋಟಗಾರಿಕೆ, ಕೃಷಿ ಬೆಳೆಗಳು, ಜಾನುವಾರುಗಳು ಮನೆ ಹಾಗೂ ಇತರೆ ರೈತರು ಹಾಗೂ ಸಾರ್ವಜನಿಕರಿಗೆ ಉಂಟಾದ ತೊಂದರೆಗಳಿಗೆ ಸರ್ಕಾರವು ಯಾವ ರೀತಿಯ ಪರಿಹಾರದ ಕ್ರಮ ಕೈಗೊಂಡಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)	ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ಅತಿವೃಷ್ಟಿಯಿಂದ ಹಾನಿಗೊಳಗಾದ ಬೆಳೆ ಹಾನಿ ಹಾಗೂ ಮೂಲ ಸೌಕರ್ಯಗಳ ತುರ್ತು ದುರಸ್ತಿಗಾಗಿ ಕ್ರಮ ಕೈಗೊಳ್ಳಲಾಗುತ್ತದೆ. ನಿಯಮಾನುಸಾರ ಬೆಳೆ ಹಾನಿ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ದಾಖಲಿಸಿದ ತಕ್ಷಣ ರೈತರ ಬ್ಯಾಂಕ್ ಖಾತೆಗೆ ಇನ್‌ಪುಟ್ ಸಬ್ಸಿಡಿ ಹಣ ಜಮೆಯಾಗುತ್ತದೆ. ಈ ವರೆಗೂ 6.60 ಲಕ್ಷ ರೈತರ ಬ್ಯಾಂಕ್ ಖಾತೆಗೆ ರೂ.443.16 ಕೋಟಿ ಜಮೆಯಾಗಿದೆ.
(ಈ) ರಾಜ್ಯಾದ್ಯಂತ ಮಳೆಯಿಂದ ಮನೆ ಕಳೆದುಕೊಂಡವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯಾದ್ಯಂತ ಮಳೆಯಿಂದ 39,975 ಮನೆ ಹಾನಿಯಾಗಿದ್ದು, (ಜಿಲ್ಲಾವಾರು ವಿವರ ಅನುಬಂಧದಲ್ಲಿ ಒದಗಿಸಿದೆ).
(ಉ) ಮನೆ ಕಳೆದುಕೊಂಡವರಿಗೆ ಪರಿಹಾರ ನೀಡಲಾಗಿದೆಯೇ; ನೀಡದಿದ್ದಲ್ಲಿ, ಅವರುಗಳ ವಿಳಾದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು;	ಮನೆ ಕಳೆದುಕೊಂಡವರ ವಿವರಗಳನ್ನು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ತಂತ್ರಾಂಶದಲ್ಲಿ ದಾಖಲಿಸಿ, ಮನೆ ನಿರ್ಮಾಣದ ಪ್ರಗತಿಯನುಸಾರ ವಿವಿಧ ಕಂತುಗಳಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ತಂತ್ರಾಂಶದ ಮೂಲಕ ಸಂತ್ರಸ್ಥರ ಬ್ಯಾಂಕ್ ಖಾತೆಗೆ ಮನೆ ಹಾನಿ ಪರಿಹಾರವನ್ನು ನೇರವಾಗಿ ಜಮೆ ಮಾಡಲಾಗುತ್ತದೆ.

(ಊ) ಪರಿಹಾರ ನೀಡದಿರುವವರಿಗೆ ಯಾವ ಕಾಲಮಿತಿಯಲ್ಲಿ ಪರಿಹಾರ ನೀಡಲಾಗುವುದು; ಹಾಗೂ ಯಾವ ಯಾವ ಮಾನದಂಡಗಳನ್ನು ಆಧಾರಿಸಿ ಪರಿಹಾರ ನೀಡಲಾಗಿದೆ?

ಮನೆಹಾನಿಯಾದ ಸಂತ್ರಸ್ಥರ ಮನೆ ನಿರ್ಮಾಣದ ಹಂತಕ್ಕನುಗುಣವಾಗಿ RGRHCL ತಂತ್ರಾಂಶದ ಮೂಲಕ ಈ ಕೆಳಕಂಡಂತೆ ಪರಿಹಾರವನ್ನು ನೇರವಾಗಿ ಸಂತ್ರಸ್ಥರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ.

ಸಂಪೂರ್ಣವಾಗಿ ಮನೆ ಹಾನಿಯಾದ ಸಂತ್ರಸ್ಥರಿಗೆ ಮನೆ ನಿರ್ಮಾಣದ ಹಂತದನುಸಾರ ಮೊದಲ ಕಂತಿನಲ್ಲಿ ರೂ.1.00 ಲಕ್ಷ, ತಳಪಾಯ ಹಂತದಲ್ಲಿ ರೂ.1.00 ಲಕ್ಷ, ಲಿಂಟಲ್ ಹಂತದಲ್ಲಿ ರೂ.1.00 ಲಕ್ಷ, ಚಾವಣಿ ಹಂತದಲ್ಲಿ ರೂ.1.00 ಲಕ್ಷ ಹಾಗೂ ಪೂರ್ಣಗೊಂಡ ನಂತರ ರೂ.1.00 ಲಕ್ಷ ಸೇರಿ ಒಟ್ಟಾರೆ ರೂ.5.00 ಲಕ್ಷಗಳನ್ನು ಬಿಡುಗಡೆ ಮಾಡಲಾಗುತ್ತದೆ.

ತೀವ್ರ ಮನೆ ಹಾನಿಯಾದ ಸಂತ್ರಸ್ಥರಿಗೆ ಮನೆ ನಿರ್ಮಾಣದ ಹಂತದನುಸಾರ 3 ಕಂತುಗಳಲ್ಲಿ ತಲಾ ರೂ.1.00 ಲಕ್ಷದಂತೆ ಒಟ್ಟಾರೆ ರೂ.3.00 ಲಕ್ಷಗಳನ್ನು ಬಿಡುಗಡೆ ಮಾಡಲಾಗುತ್ತದೆ.

ಭಾಗಶಃ ಮನೆ ಹಾನಿಯಾದ ಸಂತ್ರಸ್ಥರಿಗೆ ಒಂದೇ ಕಂತಿನಲ್ಲಿ ರೂ.50,000/-ಗಳನ್ನು ಬಿಡುಗಡೆ ಮಾಡಲಾಗುತ್ತದೆ.

ಮನೆ ಹಾನಿಯಾದ ಸಂತ್ರಸ್ಥರಿಗೆ ಕೇಂದ್ರ ಸರ್ಕಾರದಿಂದ ನಿಗದಿಪಡಿಸಿರುವ ದರಕ್ಕಿಂತ ಈ ಕೆಳಕಂಡ ಪರಿಷ್ಕೃತ ದರದಲ್ಲಿ ಪರಿಹಾರ ಪಾವತಿಸಲಾಗುತ್ತದೆ.

	ಮಾರ್ಗಸೂಚಿ ದರ	ಹೆಚ್ಚುವರಿ ದರ	ಒಟ್ಟು
ಪೂರ್ಣ ಮನೆ ಹಾನಿ	ರೂ.95,100/-	ರೂ.4,04,900	ರೂ.5.00 ಲಕ್ಷ
ತೀವ್ರ ಮನೆ ಹಾನಿ	ರೂ.95,100/-	ರೂ.2,049,00	ರೂ.3.00 ಲಕ್ಷ
ಭಾಗಶಃ ಮನೆ ಹಾನಿ	ರೂ.5,200/-	ರೂ.44,800	ರೂ.50,000/-

ಹೆಚ್ಚುವರಿ ಮೊತ್ತವನ್ನು ರಾಜ್ಯ ಸರ್ಕಾರದ ವತಿಯಿಂದ ಭರಿಸಲಾಗುತ್ತಿದೆ.

ಮನೆ ಹಾನಿ ಪರಿಹಾರ ಪಾವತಿಗಾಗಿ ರೂ.33286.71 ಲಕ್ಷಗಳನ್ನು ದಿನಾಂಕ:23-11-2021ರ ಸರ್ಕಾರಿ ಆದೇಶನ್ವಯ ಎಲ್ಲಾ ಜಿಲ್ಲೆಗಳಿಗೆ ಬಿಡುಗಡೆಗೊಳಿಸಲಾಗಿದೆ.

ಕಂಇ 537 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:-325 ಕ್ಕೆ ಅನುಬಂಧ

Districtwise details of estimated loss and relief claimed due to flood during 2021

Rs.Crores

		Crop loss			House Damages			Infra Structure			Total	
Sl.no	District	Area affected (in ha)	Estimated Loss	Relief Claimed	No of Houses	Estimated Loss	Relief Claimed	Estimated Loss	Relief Claimed	Other relief items	Estimated Loss	Relief Claimed
1	Chikamagalur	47326.39	589.00	63.11	504.00	8.16	1.89	184.20	16.91	0.18	781.36	82.09
2	Ramanagara	42024.00	329.88	28.89	406	5.68	1.44	37.33	13.96	0.09	372.90	44.37
3	Hassan	69966.50	710.38	66.08	984.00	19.96	4.98	379.17	65.78	0.03	1109.50	136.87
4	Yadagiri	4668.50	38.36	5.38	239.00	1.20	0.08	92.37	8.24	0.01	131.93	13.72
5	Chikabalapura	63926.35	523.38	48.48	1953	39.20	10.75	185.75	26.07	0.40	748.33	85.70
6	Bagalkote	47751.00	361.24	50.18	595.00	5.56	1.22	203.31	32.92	4.13	570.11	88.44
7	Belagavi	150564.30	1245.27	158.01	11912.00	288.98	72.19	647.79	110.06	53.30	2182.84	393.57
8	Gadag	43306.60	368.33	34.74	789.00	3.99	0.26	336.52	12.27	0.07	708.85	47.35
9	Uttara Kannada	4409.72	37.67	3.85	1981.00	18.00	6.36	828.82	43.10	5.65	884.79	58.96
10	Mandya	598.59	6.09	0.66	553	12.04	2.73	67.52	14.43	0.05	85.65	17.87
11	Dakshina Kannada	309.00	5.29	0.46	143	2.17	0.52	94.66	15.39	0.17	102.11	16.54
12	Raichur	44828.50	408.83	54.97	102.00	0.61	0.07	32.19	8.07	0.01	441.63	63.12
13	Dharwad	155633.76	1080.09	108.29	2180.00	19.87	2.86	415.77	30.43	0.88	1515.73	142.45
14	Davanagere	15862.35	156.62	16.23	1602.00	27.65	6.35	125.49	11.95	0.38	309.93	34.90
15	Shivamoga	8558.32	81.90	8.18	1470.00	28.41	7.21	536.43	73.20	0.69	646.74	89.28
16	Kolar	55753.20	473.34	38.63	898	9.05	2.00	38.89	3.18	0.14	521.28	43.95
17	Chitradurga	79206.00	720.49	70.50	1709	8.71	0.97	63.22	14.62	0.32	792.42	86.40
18	Bellary	60297.27	524.07	76.29	589.00	3.10	0.24	23.30	12.86	0.16	550.46	89.55
19	Koppal	49001.69	457.18	51.03	347	1.74	0.13	36.83	7.48	0.00	495.74	58.64
20	Udupi	209.52	3.19	0.24	216	2.83	0.62	79.73	5.50	0.10	85.75	6.47
21	Tumkur	130118.00	998.81	89.11	1161	18.35	4.82	87.84	13.76	0.13	1105.00	107.82
22	Haveri	58217.93	461.75	46.87	3763.00	74.02	21.12	686.26	49.25	0.39	1222.02	117.63
23	Mysuru	1321.60	12.28	1.24	2232	49.26	13.59	179.85	7.15	0.31	241.39	22.29
24	Kodagu	40581.03	868.96	27.64	275.00	3.91	0.85	199.77	42.67	0.22	221.98	71.38
25	Vijayanagara	11557.00	109.21	15.09	602	3.64	0.32	26.94	1.42	0.08	139.82	16.91
26	Chamarajanagara	2578.84	21.30	1.90	657	3.35	0.40	18.31	5.76	0.01	42.96	8.06
27	Bengaluru (r)	5865.49	49.11	4.18	728	10.39	2.63	30.78	8.97	0.16	90.27	15.94
28	Bengaluru (U)	2035.97	17.91	1.55	449	15.65	3.83	515.03	62.67	0.02	548.59	68.06
29	Kalaburgi	54533.55	353.74	36.79	513	2.57	0.16	270.11	21.13	0.57	626.42	58.65
30	Vijayapura	1007.00	8.39	1.28	64	0.32	0.02	96.24	18.43	0.00	104.95	19.73
31	Bidar	2777.30	19.72	1.97	359	1.79	0.11	36.15	14.37	0.28	57.66	16.74
	Total	**1254795.27**	**11041.79**	**1111.84**	**39975.00**	**690.08**	**170.73**	**6556.58**	**771.99**	**68.91**	**18292.57**	**2123.47**